## ಸಂಪಾದಕೀಯ

# ವ್ಯವಸಾಯಾತ್ಮಿಕ ಬುದ್ಧಿ

ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ |
ಬಹುಶಾಖಾ ಹ್ಯನಂತಾಶ್ಚ ಬುದ್ಧಯೋಽವ್ಯವಸಾಯಿನಾಮ್ ||

'ಎಲೈ ಅರ್ಜುನ, ಶಿಸ್ತುಗೊಳಿಸಲ್ಪಟ್ಟ ಬುದ್ಧಿಯು ಏಕನಿಷ್ಠವಾಗಿರುತ್ತದೆ. ಅಶಿಸ್ತಿನಿಂದ ಕೂಡಿದವರ ಬುದ್ಧಿಗಳು ಅನೇಕ ಶಾಖೆಗಳುಳ್ಳದ್ದಾಗಿರುತ್ತವೆ ಮತ್ತು ಅನಂತವಾಗಿರುತ್ತವೆ.'

### ಬುದ್ಧಿ ಎಂದರೇನು?

ಯಾವುದೇ ವಿಷಯದಲ್ಲಿ ನಿರ್ಣಯ ಮಾಡುವಂತಹ ಒಂದು ಮಾನಸಿಕ ಅಂಶವನ್ನು ಬುದ್ಧಿಯೆಂದು ಕರೆಯುತ್ತೇವೆ. ಸಂಸ್ಕೃತದಲ್ಲಿ ಇದನ್ನೇ ನಿಶ್ಚಯಾತ್ಮಿಕಾ ಬುದ್ಧಿ ಎಂದು ಹೇಳುವುದು. ಇಲ್ಲಿ ಬುದ್ಧಿ ಎಂದರೆ ನಮ್ಮ ಸಾಮಾನ್ಯ ಭಾಷೆಯಲ್ಲಿ ಬಳಸುವ, ಆಂಗ್ಲ ಭಾಷೆಯಲ್ಲಿ *intelligence* ಎಂದು ಕರೆಯುವ ಬುದ್ಧಿಯಲ್ಲ—'ಅವನು ಬುದ್ಧಿವಂತ' ಎಂದು ಹೇಳುವಾಗ ಬಳಸುವ ಬುದ್ಧಿಯಲ್ಲ. ಇದು ವೈಚಾರಿಕ ಮನಸ್ಸೂ ಅಲ್ಲ. ತುಂಬ ವಿಚಾರವಂತರನ್ನು ನಾವು ಬಹಳ ಬುದ್ಧಿವಂತರೆಂದು ಹೇಳುತ್ತೇವೆ. ಆದರೆ ಈ ಬುದ್ಧಿಯು ಸಂಕಲ್ಪ ವಿಕಲ್ಪಾತ್ಮಕ ಮನಸ್ಸಿಗೆ ಸಂಬಂಧಪಟ್ಟುದು. ಎಲ್ಲ ಬುದ್ಧಿಯ ಕಸರತ್ತು, ಬುದ್ಧಿ ಚಮತ್ಕಾರ ಇವೆಲ್ಲವೂ ಸಾಮಾನ್ಯ ಬುದ್ಧಿಯ ವಲಯಕ್ಕೇ ಸೇರಿದವು.

> ಯಾವ ವ್ಯಕ್ತಿಯಲ್ಲಿ ಎಲ್ಲವನ್ನೂ ನಿಗ್ರಹಿಸುವ 'ನಾನು' ಇರುತ್ತದೆಯೋ ಅವನಲ್ಲಿ ಇಚ್ಛೆ ಇರುತ್ತದೆ. ಎಲ್ಲಿಯವರೆಗೆ ಅವನಲ್ಲಿ ಒಂದಕ್ಕೊಂದಕ್ಕೆ ಸಂಬಂಧಿಸದ ಅನೇಕ ವಿಧದ 'ನಾನು' ಗಳಿರುತ್ತವೆಯೊ, ಅಲ್ಲಿಯವರೆಗೆ ಅವನ ಇಚ್ಛೆ ಗಳೂ ನಾನಾ ಬಗೆಯಾಗಿರುತ್ತವೆ.
>
> —ಪಿ.ಡಿ. ಔಸ್ಪೆಂಸ್ಕಿ

ನಿಜವಾದ ಬುದ್ಧಿಯು ಆಸೆಗಳ ಹಿಡಿತದಿಂದ ಮುಕ್ತವಾಗಿರಬೇಕು. ನಮ್ಮ ಬುದ್ಧಿ ಅಥವಾ ಇಚ್ಛೆ ಸಾಮಾನ್ಯವಾಗಿ ಆಸೆಗಳನ್ನು ಅನುಸರಿಸಿ ಕೆಲಸ ಮಾಡುತ್ತದೆ. ಯಾವುದೇ ಆಸೆಯು ತಲೆದೋರಿದ ಕೂಡಲೇ ಬುದ್ಧಿಯು ಅದನ್ನು ಅನುಮೋದಿಸುತ್ತದೆ. ನಾವು ಒಂದು ಆಸೆಯನ್ನು ನಿಗ್ರಹಿಸುವಾಗ ನಮ್ಮ ಇಚ್ಛೆಯನ್ನು ಉಪಯೋಗಿಸಿದರೂ ಆ ಇಚ್ಛೆಯು ಇನ್ನೊಂದು ಆಸೆಗೆ ಅನುಗುಣವಾಗಿರುತ್ತದೆ. ನಾವು ಸಿನಿಮಾಕ್ಕೆ ಹೋಗುವುದು ಬೇಡ ಎಂದು ನಿರ್ಣಯಿಸುವುದು ಬೇರಾವುದೊ ಆಸೆಯ ಪ್ರಭಾವಕ್ಕೆ ಒಳಗಾಗಿ, ಅಥವಾ ಯಾವುದಾದರೂ ಪರಿಸ್ಥಿತಿಯ ಒತ್ತಡಕ್ಕೆ ಒಳಗಾಗಿ. ಆದ್ದರಿಂದ ಇಲ್ಲಿ ಇಚ್ಛೆ ಸ್ವತಂತ್ರವಾಗಿ ಕೆಲಸಮಾಡುತ್ತಿಲ್ಲ. ಅದು ಆಸೆಗಳಿಂದ ಮುಕ್ತವಾದಾಗ ಸ್ವತಂತ್ರವಾಗುತ್ತದೆ. ಯಾವ ಆಸೆಗಳ, ಭಾವೋದ್ವೇಗಗಳ ಪ್ರಭಾವಕ್ಕೂ ಒಳಗಾಗದೆ ಒಂದು ನಿರ್ಣಯಕ್ಕೆ ಬರುವ ಶಕ್ತಿ ಬುದ್ಧಿಗೆ ಇದ್ದರೆ ಅದು ವ್ಯವಸಾಯಾತ್ಮಿಕ ಬುದ್ಧಿ. ಸಾಮಾನ್ಯ ಬುದ್ಧಿಯು ಆಸೆಗಳ ಅನಂತತೆಯಿಂದಾಗಿ ಅನಂತವಾಗಿರುತ್ತದೆ, ಶಾಖೋಪಶಾಖೆಗಳಾಗಿ ಕವಲೊಡೆದಿರುತ್ತದೆ.

### ವಿವಿಧ ಮಾನಸಿಕ ಕ್ರಿಯೆಗಳು

ನಾವು ಒಂದು ವಸ್ತುವನ್ನು ನೋಡುತ್ತೇವೆ ಅಥವಾ ಒಂದು ವಿಷಯವನ್ನು ಕೇಳುತ್ತೇವೆ ಎಂದಿಟ್ಟುಕೊಳ್ಳೋಣ. ಆ ವಸ್ತು ಅಥವಾ ವಿಷಯಕ್ಕೆ ಸಂಬಂಧಪಟ್ಟ ಸಂವೇದನೆಗಳು ಇಂದ್ರಿಯಗಳ ಮೂಲಕ ಮನಸ್ಸಿಗೆ ಹೋಗಿ ಅಲ್ಲಿ ಅದಕ್ಕೆ ಸಂಬಂಧಪಟ್ಟ ಚಿತ್ತವೃತ್ತಿಯನ್ನು ಎಬ್ಬಿಸುತ್ತದೆ. ಈಗ ರಾಗ, ದ್ವೇಷ, ಪ್ರೀತಿ, ಸುಖ, ದುಃಖ ಮುಂತಾದ ಭಾವೋದ್ವೇಗಗಳು ಕೆಲಸಮಾಡಲು ಪ್ರಾರಂಭಿಸುತ್ತವೆ. ಇವುಗಳ ಪ್ರಭಾವದಿಂದಾಗಿ ಆ ವಸ್ತು ಅಥವಾ ವಿಷಯಕ್ಕೆ ಸಂಬಂಧಪಟ್ಟಂತೆ ಮತ್ತು ಆಯಾಯ ಭಾವಕ್ಕೆ ಅನುಗುಣವಾಗಿ ಅನೇಕ ಚಿತ್ತವೃತ್ತಿಗಳು ಏಳುತ್ತವೆ. ಆಗ ಬುದ್ಧಿಯ ಪ್ರವೇಶವಾಗುತ್ತದೆ. ಭಾವೋದ್ವೇಗಗಳು ಆಗಲೇ ಸಾಕಷ್ಟು ಕೆಲಸಮಾಡಿ ಮನಸ್ಸಿನ ಮೇಲೆ ತಮ್ಮ ಪ್ರಭಾವವನ್ನು ಬೀರಿರುವುದರಿಂದ ಬುದ್ಧಿಯು ಅವಕ್ಕನುಗುಣವಾಗಿಯೇ ನಿರ್ಣಯವನ್ನು ನೀಡುತ್ತದೆ. ಇದು ಪಾರ್ಲಿಮೆಂಟ್‌ನಲ್ಲಿ ನಿರ್ಣಯವಾದ ಕಾಯಿದೆಗೆ ಪ್ರೆಸಿಡೆಂಟ್ ಒಪ್ಪಿಗೆ ನೀಡುವಂತೆ. ಭಾವೋದ್ವೇಗದ ಪ್ರಭಾವಕ್ಕೆ ಒಳಗಾಗದೆ ಬುದ್ಧಿ ಕೆಲಸ ಮಾಡುವಂತಿದ್ದರೆ ಅದು ಸ್ವತಂತ್ರ ಇಚ್ಛೆಯಾಗುತ್ತದೆ.

ಒಂದು ಸಂಕೀರ್ತನೆ ನಡೆಯುತ್ತಿದ್ದರೆ ಅದರಲ್ಲಿ ಒಬ್ಬ ಪ್ರಧಾನ ನರ್ತಕನಿರುತ್ತಾನೆ. ಅವನ ಸುತ್ತ ಇತರ ಭಕ್ತರು ನರ್ತಿಸುತ್ತಾರೆ. ಅದಕ್ಕೆ ಸಂಗೀತದ ಹಿಮ್ಮೇಳವಿರುತ್ತದೆ ಹಾಗೂ ಮೃದಂಗವೇ ಮುಂತಾದ ವಾದ್ಯಗಳಿರುತ್ತವೆ. ಅಲ್ಲಿ ಬುದ್ಧಿಯೇ ಪ್ರಧಾನ ನರ್ತಕ; ಚಿತ್ತವೃತ್ತಿಗಳು ಅದರ ಸುತ್ತ ಕುಣಿಯುತ್ತವೆ. ಭಾವೋದ್ವೇಗಗಳು ಹಿನ್ನೆಲೆ ಸಂಗೀತ ಹಾಗೂ ಇಂದ್ರಿಯ ಕ್ರಿಯೆಗಳು ಮೃದಂಗಾದಿ ವಾದ್ಯಗಳು. ಆದರೆ ಸಾಮಾನ್ಯ ಸ್ಥಿತಿಯಲ್ಲಿ ಬುದ್ಧಿಯನ್ನು ಅನುಸರಿಸಿ ಇತರ ವೃತ್ತಿಗಳು ಕೆಲಸ ಮಾಡುವ ಬದಲು ಬುದ್ಧಿಯೇ ಇತರ ವೃತ್ತಿಗಳನ್ನು ಅನುಸರಿಸುತ್ತದೆ.

### ಜ್ಞಾನದೀಪ್ತ ಬುದ್ಧಿ

ಇದು ತಿರುಗುಮುರುಗಾಗಬೇಕು.ಬುದ್ಧಿಯಿಂದ ನಿಗ್ರಹ ಪ್ರಾರಂಭವಾಗಿ ಬೇರೆಲ್ಲವೂ ಅದರ ಹಿಡಿತದಲ್ಲಿರಬೇಕು. ಇದನ್ನು

ಕಠೋಪನಿಷತ್ತು ಒಂದು ಸುಂದರವಾದ ರೂಪಕದ ಮೂಲಕ ವಿವರಿಸುತ್ತದೆ:

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು ।
ಬುದ್ಧಿಂ ತು ಸಾರಥಿಂ ವಿದ್ಧಿ
ಮನಃ ಪ್ರಗ್ರಹಮೇವ ಚ ॥
ಇಂದ್ರಿಯಾಣಿ ಹಯಾನ್ಯಾಹುಃ
ವಿಷಯಾಂಸ್ತೇಷು ಗೋಚರಾನ್ ॥

'ಶರೀರವನ್ನು ರಥವೆಂದೂ ಆತ್ಮನು ಅದರಲ್ಲಿ ಪಯಣಿಸುವ ರಥಿಯೆಂದೂ ತಿಳಿ. ಬುದ್ಧಿಯು ಸಾರಥಿ, ಮನಸ್ಸು ಕಡಿವಾಣ ಮತ್ತು ಇಂದ್ರಿಯಗಳು ಕುದುರೆಗಳು. ಇಂದ್ರಿಯ ವಿಷಯಗಳು ಈ ರಥವು ಚಲಿಸುವ ಹಾದಿ.'



ಶತ್ರುವು ತನ್ನ ವಿರೋಧಿಗೆ ಏನು ಕೇಡು ಮಾಡಬಹುದೊ, ದ್ವೇಷಿಸುವವನು ದ್ವೇಷ್ಯ ವ್ಯಕ್ತಿಗೆ ಏನು ಕೇಡು ಮಾಡಬಹುದೊ ತಪ್ಪಾಗಿ ನಿರ್ದೇಶಿಸಲ್ಪಟ್ಟ ಮನಸ್ಸು ಇದಕ್ಕಿಂತಲೂ ಮಹತ್ತರ ವಾದ ಕೇಡನ್ನುಂಟುಮಾಡುತ್ತದೆ. —ಬುದ್ಧ

ಇಲ್ಲಿ ಸಾರಥಿಯಾದ ಬುದ್ಧಿಯು ಎಚ್ಚರಗೊಂಡಿದ್ದು ಮನಸ್ಸೆಂಬ ಕಡಿವಾಣವನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದರೆ ಇಂದ್ರಿಯಗಳೆಂಬ ಕುದುರೆಗಳು ಸರಿಯಾದ ರಸ್ತೆಯಲ್ಲಿ ನಡೆಯುತ್ತವೆ. ಆಗ ರಥವು ತನ್ನ ನಿರ್ದಿಷ್ಟ ಗುರಿಯನ್ನು ಸೇರಬಹುದು.

ನಾವು ಆಧ್ಯಾತ್ಮಿಕ ಸಾಧನೆಯಲ್ಲಿ ಮುಂದುವರಿಯುತ್ತ, ರಾಗದ್ವೇಷಾದಿ ಭಾವವಿಕಾರಗಳು ಕ್ಷೀಣಗೊಂಡಂತೆಲ್ಲ, ನಮ್ಮ ಆಸೆಗಳು ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡಂತೆಲ್ಲ ಬುದ್ಧಿಯು ಅವುಗಳಿಂದ ಹೆಚ್ಚು ಹೆಚ್ಚು ಮುಕ್ತವಾಗುತ್ತ ಬರುತ್ತದೆ. ಬುದ್ಧಿಯು ಆಸೆಗಳೆಂಬ ಕಲ್ಮಷಗಳಿಂದ ಮುಕ್ತವಾದಂತೆಲ್ಲ ಅಂತರಾತ್ಮನ ಬೆಳಕು ಅದರ ಮೂಲಕ ಪ್ರತಿಬಿಂಬಿತವಾಗುತ್ತದೆ. ಇಂತಹ ಬುದ್ಧಿಯನ್ನೇ ಜ್ಞಾನದೀಪ್ತಬುದ್ಧಿ (*Enlightened Intelligence*)ಎಂದು ಕರೆಯುವುದು (ಜ್ಞಾನದೀಪೇನ ಭಾಸ್ವತಾ). ಇದೇ ನಿಜವಾದ ಜ್ಞಾನ ಚಕ್ಷು. ಇದೇ ಭಗವಂತನನ್ನು ಪಡೆಯುವ ಸಾಧನ. ಆದ್ದರಿಂದಲೇ ಶ್ರೀಕೃಷ್ಣನು, 'ನನ್ನ ಭಕ್ತರಿಗೆ ಈ ಬುದ್ಧಿಯನ್ನು ನೀಡುತ್ತೇನೆ. ಇದರ ಮೂಲಕ ಅವರು ನನ್ನನ್ನು ಪಡೆಯುತ್ತಾರೆ,'(ದದಾಮಿ ಬುದ್ಧಿ ಯೋಗಂ ತಂ ಯೇನ ಮಾಮುಪಯಾಂತಿ ತೇ) ಎನ್ನುತ್ತಾನೆ.

### ಆಧ್ಯಾತ್ಮಿಕ ಜೀವನದಲ್ಲಿ ಬುದ್ಧಿಯ ಪಾತ್ರ

ನಾವು ಯಾವುದೇ ಕಾರ್ಯವನ್ನು ಮಾಡುವಾಗ ಅಲ್ಲಿ ಮೂರು ಅಂಶಗಳು ಕೆಲಸ ಮಾಡಬೇಕು: ಮನಸ್ಸು ಆ ಕಾರ್ಯವನ್ನು ಕುರಿತು ಆಲೋಚಿಸಬೇಕು; ಆ ಕಾರ್ಯದಲ್ಲಿ ಆಸಕ್ತಿಯಿರಬೇಕು, ಅಂದರೆ ಅಲ್ಲಿ ಭಾವ ತೊಡಗಿರಬೇಕು; ಮತ್ತು ಅದು ಇಚ್ಛಾಪೂರ್ವಕವಾಗಿರಬೇಕು. ನಾವು ಅಧ್ಯಯನ ಮಾಡುತ್ತಿರುವಾಗ ಮನಸ್ಸು ಅಧ್ಯಯನದ ವಿಷಯವನ್ನು ಕುರಿತು ಆಲೋಚಿಸುತ್ತಿರಬೇಕು, ಆ ವಿಷಯದಲ್ಲಿ ಆಸಕ್ತಿ ಇರಬೇಕು ಮತ್ತು ಅಧ್ಯಯನ ಮಾಡಬೇಕೆಂಬ ಪ್ರಬಲ ಇಚ್ಛೆಯೂ ಇರಬೇಕು. ಈ ಮೂರರಲ್ಲಿ ಯಾವ ಒಂದು ಅಂಶವು ಇಲ್ಲದಿದ್ದರೂ ಕಾರ್ಯ ಸರಿಯಾಗಿ ನೆರವೇರುವುದಿಲ್ಲ. ಇದೇ ಆಧ್ಯಾತ್ಮಿಕ ಸಾಧನೆಗೂ ಅನ್ವಯಿಸುತ್ತದೆ. ಇಲ್ಲಿ ಇಚ್ಛೆ ಅಥವಾ ಬುದ್ಧಿ ಅತ್ಯಂತ ಮುಖ್ಯವಾದುದು. ಇಚ್ಛೆ ಪ್ರಬಲವಾಗಿದ್ದರೆ ಆಸಕ್ತಿಯು ಕ್ರಮೇಣ ಸಹಕರಿಸುತ್ತದೆ. ಆಸಕ್ತಿ ಉಂಟಾದಮೇಲೆ ಆಲೋಚನೆಯೂ ತಾನೇ ತಾನಾಗಿ ಕೆಲಸ ಮಾಡುತ್ತದೆ. ಸಂಗೀತ ಕಲಿಯಬೇಕೆಂಬ ಪ್ರಬಲ ಇಚ್ಛೆಯಿದ್ದರೆ, ಕಲಿಯಲು ಪ್ರಾರಂಭಿಸಿದರೆ ಕ್ರಮೇಣ ಸಂಗೀತದಲ್ಲಿ ಆಸಕ್ತಿ ಕೆರಳುತ್ತಾ ಹೋಗುತ್ತದೆ, ಮತ್ತೆ ಆಲೋಚನೆಯೂ ಸಹಕರಿಸುತ್ತದೆ. ಕೆಲವರಿಗೆ ಉತ್ತಮ ಸಂಗೀತವನ್ನು ಕೇಳಿದಾಗ ಅಥವಾ ಬೇರಾವುದಾದರೂ ಕಾರಣದಿಂದ ಸಂಗೀತವನ್ನು ಕಲಿಯಬೇಕೆಂಬ ತೀವ್ರ ಉತ್ಸಾಹ ಜಾಗೃತವಾಗಬಹುದು. ಅದರ ಹಿಂದೆ ಪ್ರಬಲ ಇಚ್ಛೆ ಇಲ್ಲದಿದ್ದರೆ, ಆರಂಭದ ಉತ್ಸಾಹ ಕುಂದಿದ ಮೇಲೆ ಸಂಗೀತಾಭ್ಯಾಸವನ್ನು ಸಂಪೂರ್ಣ ಬಿಟ್ಟುಬಿಡಬಹುದು. ಈ ಉದಾಹರಣೆ ಆಧ್ಯಾತ್ಮಿಕ ಜೀವನಕ್ಕೂ ಹೊಂದಿಕೆಯಾಗುತ್ತದೆ. ಜೀವನದಲ್ಲಿ ಏನಾದರೂ ದುರ್ಘಟನೆ ನಡೆದಾಗ ವ್ಯಕ್ತಿಯಲ್ಲಿ ವೈರಾಗ್ಯವು ಉದಿಸಿ ಆಧ್ಯಾತ್ಮಿಕ ಜೀವನದಲ್ಲಿ ತೀವ್ರ ಉತ್ಸಾಹ ಉಂಟಾಗಬಹುದು. ಈ ಭಾವೋದ್ವೇಗದ ಸೆಳೆತಕ್ಕೆ ಒಳಗಾಗಿ ಅವನು ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಬಹುದು. ಆದರೆ ಪ್ರಬಲ ಇಚ್ಛೆ ಇಲ್ಲದಿದ್ದರೆ ಕೆಲವು ಕಾಲದ ನಂತರ ಭಾವ ತಣ್ಣಗಾದಮೇಲೆ ಅವನು ಸಾಧನೆಯನ್ನು ಸಂಪೂರ್ಣ ಬಿಟ್ಟುಬಿಡಬಹುದು. ಆದರೆ ಪ್ರಬಲ ಇಚ್ಛೆಯುಳ್ಳವನು ಭಾವವು ತಣ್ಣಗಾದಮೇಲೂ ಸಾಧನೆಯನ್ನು ಮುಂದುವರಿಸುತ್ತಾನೆ. ಅವನ ಮನಸ್ಸು ಶುಷ್ಕವಾಗಿರಲಿ, ಭಾವಪೂರ್ಣವಾಗಿರಲಿ ಸಾಧನೆಯನ್ನು ನಿಲ್ಲಿಸುವುದಿಲ್ಲ.

ಶ್ರೀರಾಮಕೃಷ್ಣರು ಒಂದು ಉದಾಹರಣೆಯ ಮೂಲಕ ಇದನ್ನು ವಿವರಿಸುತ್ತಿದ್ದರು. ಸಾಂಪ್ರದಾಯಿಕ ಬೇಸಾಯಗಾರನು ಒಂದು ವರ್ಷ ಮಳೆ ಬರಲಿಲ್ಲವೆಂದು ಬೇಸಾಯ ವೃತ್ತಿಯನ್ನು ಬಿಟ್ಟು ಬೇರೆ ವೃತ್ತಿಯನ್ನು ಹಿಡಿಯುವುದಿಲ್ಲ. ಮಳೆ ಬರಲಿ ಬರದೇ ಇರಲಿ ತನ್ನ ಬೇಸಾಯದ ಕಸುಬನ್ನೆ ಮುಂದುವರಿಸಿಕೊಂಡು ಹೋಗುತ್ತಾನೆ. ಹಾಗೆಯೇ ನಿಜವಾದ ಸಾಧಕನು ತೀವ್ರ ಆಸಕ್ತಿ ಇರಲಿ ಇಲ್ಲದಿರಲಿ, ಮನಸ್ಸು ಶುಷ್ಕವಾಗಿರಲಿ ಭಾವಶೈತ್ಯದಿಂದ ಕೂಡಿರಲಿ, ಸಾಧನೆಯನ್ನು ಮಾತ್ರ ಎಡೆಬಿಡದೆ ಮುಂದುವರಿಸಿಕೊಂಡು ಹೋಗುತ್ತಾನೆ.

### ಬುದ್ಧಿ ಎಂಬ ಡ್ರೈವರ್

ಆಲೋಚನೆಯ ಪಾತ್ರ ಅತ್ಯಂತ ಕಿರಿದಾದುದು. ಕೇವಲ ಆಲೋಚನೆಯಿಂದ ಏನನ್ನೂ ಸಾಧಿಸಲಾಗುವುದಿಲ್ಲ. ಸಂಗೀತದ ಬಗ್ಗೆ ಆಲೋಚಿಸುವುದರಿಂದ ಸಂಗೀತ ಬರುವುದಿಲ್ಲ. ಶ್ರೀರಾಮಕೃಷ್ಣರು ಹೇಳುತ್ತಿದ್ದಂತೆ ಕೇವಲ ಸಿದ್ಧಿ ಸಿದ್ಧಿ (ಒಂದು ಮಾದಕದ್ರವ್ಯ) ಎಂದ ಮಾತ್ರಕ್ಕೆ ಅಮಲೇರುವುದಿಲ್ಲ. ಅದನ್ನು ತಯಾರಿಸಿ ಸೇವಿಸಬೇಕು. ಆಗಲೇ ಅಮಲೇರುತ್ತದೆ. ಕೇವಲ

ಒಬ್ಬನ ತಲೆಯ ಮೇಲೆ ಕೆಂಗೆಂಡವನ್ನು ಇಟ್ಟರೆ ಅವನು ಅದನ್ನು ಆಚೆಗೆಸೆಯಲು ಎಷ್ಟು ಕಾತರನಾಗುತ್ತಾನೆ, ನೋಡಿ. ಯಾರು ತಾವು ಪ್ರಕೃತಿಯ ಗುಲಾಮರೆಂದು ನಿಜವಾಗಿ ತಿಳಿಯುವರೊ, ಅವರು ತಾವು ಮುಕ್ತರಾಗಬೇಕೆಂದು ಮಾಡುವ ಹೋರಾಟವೂ ಹೀಗೆಯೇ ಇರುವುದು.

—ಸ್ವಾಮಿ ವಿವೇಕಾನಂದ

ಭಾವೋದ್ವೇಗದಿಂದಲೂ ಪ್ರಯೋಜನವಾಗುವುದಿಲ್ಲ. ಇದು ಆಲೋಚನೆಗೆ ಶಕ್ತಿಯನ್ನು ನೀಡುತ್ತದೆ. ಈ ಶಕ್ತಿಯು ಕ್ರಿಯಾರೂಪ ವಲ್ಲಿ ವ್ಯಕ್ತವಾಗುವುದು ಇಚ್ಛೆಯಿಂದ. ಆಲೋಚನೆಯು ವಾಹನದ ಎಂಜಿನ್ ಇದ್ದ ಹಾಗೆ. ಕೇವಲ ಎಂಜಿನ್‌ನಿಂದ ಯಾವ ಪ್ರಯೋಜನವೂ ಇಲ್ಲ. ಅದು ಕೆಲಸ ಮಾಡಬೇಕಾದರೆ ಭಾವೋದ್ವೇಗದ ಪೆಟ್ರೋಲ್ ಬೇಕು. ಆದರೆ ವಾಹನವನ್ನು ನಡೆಸುವ ಡ್ರೈವರ್ ಅಥವಾ ಇಚ್ಛೆ ಇಲ್ಲದಿದ್ದರೆ ವಾಹನ ಮುಂದುವರಿಯುವು ದಿಲ್ಲ. ಆದ್ದರಿಂದ ಈ ಇಚ್ಛೆ ನಮ್ಮ ಜೀವನದಲ್ಲಿ ಅತ್ಯಂತ ಮುಖ್ಯವಾದುದು. ಇದನ್ನು ಸರಿಯಾಗಿ ಶಿಸ್ತುಗೊಳಿಸಿದರೆ, ಆಸೆಗಳ ಒತ್ತಡದಿಂದ ಮುಕ್ತಗೊಳಿಸಿದರೆ, ಬೇರೆ ಬೇರೆ ಪ್ರಭಾವಗಳಿಗೆ ಒಳಗಾಗದೆ ಅದು ಸ್ವತಂತ್ರವಾಗಿ ಕೆಲಸಮಾಡುವಂತಾದರೆ, ನಮ್ಮ ಜೀವನದ ಎಲ್ಲ ಕ್ಷೇತ್ರದಲ್ಲಿಯೂ ಅದು ನಮಗೆ ಸಹಾಯಕ ವಾಗುತ್ತದೆ, ಮಾರ್ಗದರ್ಶಕವಾಗುತ್ತದೆ.

### ಸೂತ್ರಧಾರ ಬುದ್ಧಿ

ಆಗಲೇ ನಮಗೆ ನಿಜವಾದ ಸ್ವಾತಂತ್ರ್ಯ ಎಂದರೇನೆಂಬುದು ಅರ್ಥವಾಗುತ್ತದೆ. ನಮಗೆ ನಾವೇ ಯಜಮಾನರಾದಾಗ ನಾವು ನಿಜವಾದ ಸ್ವಾತಂತ್ರ್ಯದ ಸವಿಯನ್ನು ಸವಿಯುತ್ತೇವೆ. ನಾವು ಹೊರಗಡೆ ಎಷ್ಟೋ ಜನರಿಗೆ ಯಜಮಾನರಾಗಿರಬಹುದು, ಜಗತ್ತಿಗೇ ಒಡೆಯರಾಗಿರಬಹುದು. ಆದರೆ ನಮಗೆ ನಾವೇ ಯಜಮಾನರಾಗದೆ ನಾವು ಸ್ವತಂತ್ರರು ಎಂದು ಹೇಳಲಾಗುವುದಿಲ್ಲ. ನಾವು ಇಂದ್ರಿಯಗಳಿಗೆ ಗುಲಾಮರು, ಆಸೆಗಳಿಗೆ ಗುಲಾಮರು, ಭಾವೋದ್ವೇಗಗಳಿಗೆ ಗುಲಾಮರು. ಕೆಲವೇ ಕ್ಷಣ ನಮ್ಮ ಆಲೋಚನೆಗಳನ್ನು ನಾವು ನಿಗ್ರಹಿಸ ಲಾರೆವು. ಬಾಹ್ಯದಲ್ಲಾಗುವ ಸಣ್ಣ ಪುಟ್ಟ ಆಗುಹೋಗು ಗಳೂ ನಮ್ಮ ಮಾತು ಕೃತಿ ಆಲೋಚನೆಗಳನ್ನು ನಿಯಂತ್ರಿಸುತ್ತವೆ. ಒಂದು ಮಾತು, ಒಂದು ದೃಶ್ಯ ನಮ್ಮ ಭಾವೋದ್ವೇಗವನ್ನು ಕೆರಳಿಸುತ್ತದೆ. ವಾಸ್ತವ ದೃಷ್ಟಿಯಿಂದ ನಮ್ಮನ್ನು ನಾವು ವಿಶ್ಲೇಷಿಸಿ ಕೊಂಡಾಗ ನಾವು ನಿಜವಾಗಿಯೂ ಸೂತ್ರದ ಗೊಂಬೆಗಳಂತಿದ್ದೇವೆ ಎಂಬುದು ಅರಿವಾಗುತ್ತದೆ. ಹೊರಗಿನ ಮತ್ತು ಒಳಗಿನ ಆಗು ಹೋಗುಗಳು, ಸೂತ್ರಗಳು ಗೊಂಬೆಯನ್ನು ಕುಣಿಸುವಂತೆ, ನಮ್ಮನ್ನು ಕುಣಿಸುತ್ತಿವೆ. ಈಗ ಈ ಸೂತ್ರಗಳು ಪ್ರಾಪಂಚಿಕ ವಿಷಯದ ಕೈಯಲ್ಲಿವೆ. ಕೆಲವರ ಸೂತ್ರ ಹಣದ ಕೈಯಲ್ಲಿದೆ, ಇನ್ನು ಕೆಲವರದು ಅಧಿಕಾರದ ಕೈಯಲ್ಲಿದೆ, ಇನ್ನು ಕೆಲವರದು ಯಾವುದೋ ವ್ಯಕ್ತಿಯ ಕೈಯಲ್ಲಿದೆ, ಮತ್ತೆ ಕೆಲವರದು ಯಾವುದೋ ಮತದ ಕೈಯಲ್ಲಿದೆ. ಇನ್ನು ಕೆಲವರನ್ನು ಒಮ್ಮೊಮ್ಮೆ ಒಂದೊಂದು ವಿಷಯವು ಆಡಿಸುತ್ತಿರುತ್ತದೆ.

ನಮ್ಮ ಸೂತ್ರಗಳನ್ನು ಜ್ಞಾನದೀಪ್ತಬುದ್ಧಿಯ ಕೈಯಲ್ಲಿ ಕೊಡಬೇಕು. ಬುದ್ಧಿ 'ಸೂತ್ರಧಾರ'ನಾಗಬೇಕು. ಅಂತಹ ಬುದ್ಧಿಯ ಹಿಂದೆ ಭಗವಂತನೇ ಕೆಲಸ ಮಾಡುತ್ತಾನೆ. ಆದ್ದರಿಂದ ನಾವು ಭಗವಂತನಲ್ಲಿ ಶರಣಾದರೆ ಅವನು ನಮ್ಮ ಬುದ್ಧಿಸ್ಥಾನವಾದ ಹೃದಯದಲ್ಲಿ ನೆಲಸಿ ನಮ್ಮ ಬುದ್ಧಿಯನ್ನು ವ್ಯವಸಾಯಾತ್ಮಿಕ ವಾಗಿಸುತ್ತಾನೆ. ಆದ್ದರಿಂದ ಶ್ರೀಕೃಷ್ಣ ಹೇಳುತ್ತಾನೆ,

**ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ**

'ಅವನನ್ನೇ ಸರ್ವಭಾವಗಳಲ್ಲೂ ಶರಣಾಗು' ಎಂದು. ಆಗ ನಮ್ಮ ಸೂತ್ರ ಭಗವಂತನ ಕೈಯಲ್ಲಿರುತ್ತದೆ.

"ನಾನು ಏಸುವಿಗೆ ನನ್ನನ್ನು ಸಂಪೂರ್ಣ ಸಮರ್ಪಿಸಿಕೊಂಡೆ, ಅವನ ಕೈಯಲ್ಲಿ ಆಟದ ಗೊಂಬೆಯಂತಾದೆ. ನಾನು ಅವನಿಗೆ ಹೇಳಿದೆ : 'ಮಕ್ಕಳು ಬಹಳ ಬೆಲೆಬಾಳುವ ಗೊಂಬೆಯನ್ನು ಮುಟ್ಟುವುದಕ್ಕೆ ಹೋಗುವುದಿಲ್ಲ, ದೂರದಿಂದಲೇ ನೋಡಿ ಆನಂದಿಸುತ್ತಾರೆ. ಹಾಗೆ ನನ್ನನ್ನು ನೋಡಬೇಡ. ಮಕ್ಕಳು ಒಂದು ಸಾಮಾನ್ಯ ಚೆಂಡನ್ನು ನೆಲಕ್ಕೆ ಬಡಿಯುತ್ತಾರೆ, ಮೇಲೆ ಎಸೆಯುತ್ತಾರೆ, ಒದೆಯುತ್ತಾರೆ, ಕೆಲವೊಮ್ಮೆ ಮೂಲೆಯಲ್ಲಿ ಬಿಸಾಕುತ್ತಾರೆ, ಇನ್ನು ಕೆಲವೊಮ್ಮೆ ಎದೆಗಪ್ಪಿಕೊಳ್ಳುತ್ತಾರೆ. ಹೀಗೆ ಮನಬಂದಂತೆ ಅದರೊಡನೆ ಆಟವಾಡುತ್ತಾರೆ. ಇಂತಹ ಆಟದ ಗೊಂಬೆಯಂತೆ ನನ್ನನ್ನು ಉಪಯೋಗಿಸು.' ಒಂದು ಮಾತಿನಲ್ಲಿ ಹೇಳಬೇಕಾದರೆ, ಕೇವಲ ಅವನ ಮನಸ್ಸನ್ನು ತಣಿಸುವುದೊಂದೇ ನನ್ನ ಪೂರ್ಣ ಆಸೆಯಾಗಿತ್ತು, ಅವನಿಗೆ ಇಚ್ಛೆ ಬಂದಂತೆ ನನ್ನನ್ನು ತನ್ನಾಟದಲ್ಲಿ ಬಳಸಿಕೊಳ್ಳಲಿ ಎಂಬುದೊಂದೇ ನನ್ನ ಹೆಬ್ಬಯಕೆಯಾಗಿತ್ತು."

—ಸಂತ ಥೆರೇಸ್ ಆಫ್ ಲಿಸಿಯಕ್ಸ್